KAMD310029672022

# **1** ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ**.**ಎಂ**.**ಎಫ್**.**ಸಿ ನ್ಯಾಯಾಲಯ**,** ಮದ್ದೂರು**.**

ಉಪಸ್ಥಿತರು ಃ- ಶ್ರೀಮತಿ**. ಪಾರ್ವತಿ ಸಿ.ಎಂ.,** ಬಿ.ಎ.ಎಲ್, ಎಲ್.ಎಲ್.ಬಿ.,
1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಮದ್ದೂರು.

ದಿನಾಂಕ **02** ನೇ ಏಪ್ರಿಲ್ **2026**

ಸಿ**.**ಸಿ ನಂಬರ್ **2046/2022**

ಪಿರ್ಯಾದುದಾರರು :- ಸರ್ಕಾರದ ಪರವಾಗಿ
ಕೆಸ್ತೂರು ಪೊಲೀಸರು

*(*ಪ್ರತಿನಿಧಿಸುವವರು ಮಾನ್ಯ
ಸಹಾಯಕ ಸರ್ಕಾರಿ ಅಭಿಯೋಜಕರು*)*

<u>ವಿರುದ್ಧ</u>

ಆರೋಪಿ :- ಮಂಜುಕುಮಾರ್ ಎಲ್ ಬಿನ್ ಲೇ.ಲಿಂಗರಾಜು,
32 ವರ್ಷ, ವಾಸಃ ವಳಗೆರೆದೊಡ್ಡಿ ಗ್ರಾಮ,
ಮದ್ದೂರು ತಾಲ್ಲೂಕು.

*(*ಪ್ರತಿನಿಧಿಸುವವರು ಎನ್**.**ಎಲ್**.**ಡಿ**.,** ವಕೀಲರು*)*

| | |
|---|---|
| ಅಪರಾಧ ನಡೆದ ದಿನಾಂಕ | 24.07.2022 |
| ಪ್ರಕರಣ ದಾಖಲು ಮಾಡಿದ ದಿನಾಂಕ | 24.07.2022 |
| ದೂರುದಾರರ ಹೆಸರು | ನವೀನ್ ಕುಮಾರ್ |
| ಸಾಕ್ಷಿದಾರರ ವಿಚಾರಣೆ ಪ್ರಾರಂಭಿಸಿದ ದಿನಾಂಕ | 08.01.2026 |
| ಸಾಕ್ಷಿದಾರರ ವಿಚಾರಣೆ ಮುಕ್ತಾಯದ ದಿನಾಂಕ | 08.01.2026 |

| | |
|---|---|
| ಅಪರಾಧದ ಕಲಂಗಳು | ಭಾರತೀಯ ಮೋಟಾರು ವಾಹನ ಕಾಯ್ದೆಯ ಕಲಂ 185 |
| ತೀರ್ಪು ಪ್ರಕಟಿಸಿದ ದಿನಾಂಕ | 02.04.2026 |
| ನ್ಯಾಯಾಧೀಶರ ಅಭಿಪ್ರಾಯ | ಆರೋಪಿಯನ್ನು ದೋಷಿ ಎಂದು ಪರಿಗಣಿಸಿ ಆದೇಶ ಮಾಡಲಾಗಿದೆ. |

(ಶ್ರೀಮತಿ. ಪಾರ್ವತಿ ಸಿ.ಎಂ)
1 ನೇ ಅಪರ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.,
ಮದ್ದೂರು.

## ತೀರ್ಪು

ಪ್ರಸ್ತುತ ತೀರ್ಪು ಕೆಸ್ತೂರು ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಆರೋಪಿಯು ಭಾರತೀಯ ಮೋಟಾರು ವಾಹನ ಕಾಯ್ದೆಯ ಕಲಂ 185 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ಸಲ್ಲಿಸಿದ ಅಂತಿಮ ವರದಿಯ ಮೇಲೆ ಉದ್ಭವವಾಗಿರುತ್ತದೆ.

**2.** ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ,

ದಿನಾಂಕ 24.07.2022 ರಂದು ಸಂಜೆ 6.10 ಗಂಟೆ ಸಮಯದಲ್ಲಿ ಕೆಸ್ತೂರು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಮಾಚಹಳ್ಳಿ ಗೇಟ್ ನ ಮಾಚಹಳ್ಳಿ-ಚನ್ನಪಟ್ಟಣ ರಸ್ತೆಯಲ್ಲಿ ಚಾಸಾ.1 ರವರು ಸಮವಸ್ತ್ರದಲ್ಲಿ ವಾಹನಗಳನ್ನು ತಪಾಸಣೆ ಮಾಡುತ್ತಿದ್ದಾಗ ಆರೋಪಿಯು ಮದ್ಯಪಾನ ಮಾಡಿ ತನ್ನ ಬಾಬ್ತು ಕೆಎ.11 ಬಿ.2792 ಸಂಖ್ಯೆಯ ಕಾರನ್ನು ಚಾಲನೆ ಮಾಡಿಕೊಂಡು ಹೋಗಿರುತ್ತಾರೆ. ಆ ಮೂಲಕ ಆರೋಪಿಯು ಮೇಲ್ಕಂಡ ಆಪಾದಿತ ಕೃತ್ಯವನ್ನು ಎಸಗಿರುತ್ತಾರೆಂಬುದು ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶವಾಗಿರುತ್ತದೆ.

**3.** ಅಭಿಯೋಜನಾ ದಾಖಲಾತಿಗಳನ್ನು ಪರಿಶೀಲಿಸಿದಾಗ ಘಟನೆಗೆ ಸಂಬಂಧಿಸಿದಂತೆ ಚಾಸಾ.1 ರವರು ಸ್ವಯಂಪ್ರೇರಿತವಾಗಿ ಪ್ರಕರಣವನ್ನು ದಾಖಲಿಸಿಕೊಂಡು ತನಿಖಾ ಪ್ರಕ್ರಿಯೆಗಳನ್ನು ಕೈಗೊಂಡು ಅಂತಿಮವಾಗಿ ಆರೋಪಿಯ ವಿರುದ್ದ ಅಂತಿಮ ವರದಿಯನ್ನು ಸಲ್ಲಿಸಿರುವುದು ಗೋಚರವಾಗಿರುತ್ತದೆ.

**4.** ಅಭಿಯೋಜನಾ ದಾಖಲಾತಿಗಳನ್ನು ಸ್ವೀಕರಿಸಿದ ನಂತರ ಯಥಾಪ್ರಕಾರ ಅವುಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿರುತ್ತದೆ. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 190 ಕ್ಲಾಸ್ (1) (ಬಿ) ರಡಿಯಲ್ಲಿ ಆರೋಪಿಯ ವಿರುದ್ಧ ಭಾರತೀಯ ಮೋಟಾರು ವಾಹನ ಕಾಯ್ದೆಯ ಕಲಂ 185 ರ ಅಪರಾಧಗಳಿಗೆ ಸಂಜ್ಞೇಯತೆಯನ್ನು ತೆಗೆದುಕೊಳ್ಳಲಾಗಿರುತ್ತದೆ.

**5.** ಆರೋಪಿಯು ನ್ಯಾಯಾಲಯದಿಂದ ಜಾಮೀನನ್ನು ಪಡೆದುಕೊಂಡಿರುತ್ತಾರೆ. ನ್ಯಾಯಾಲಯದ ಸಮನ್ಸ್ ಗೆ ಪ್ರತಿಯಾಗಿ ಹಾಜರಾದ ಆರೋಪಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರಲ್ಲಿ ಪ್ರತ್ಯಾಯೋಜಿಸಲಾಗಿರುವಂತೆ ಅಭಿಯೋಜನಾ ದಾಖಲಾತಿಗಳ ನಕಲನ್ನು ನೀಡಲಾಗಿರುತ್ತದೆ. ಆರೋಪಿಯು ನಿರ್ದೋಷಿ ಎಂದು ಪರಿಗಣಿಸುವ ಯಾವುದೇ ಅಂಶಗಳು ಅಭಿಯೋಜನಾ ದಾಖಲಾತಿಗಳಲ್ಲಿ ಲಭ್ಯವಿಲ್ಲದಿರುವ ಕಾರಣ ಆರೋಪಿಯ ವಿರುದ್ಧ ದೋಷಾರೋಪಣೆ ರಚಿಸಿ ಅವರಿಗೆ ತಿಳಿಸಿದ ಭಾಷೆಯಲ್ಲಿ ಓದಿ ವಿವರಿಸಲಾಗಿರುತ್ತದೆ. ಅರ್ಥೈಸಿಕೊಂಡ ಆರೋಪಿಯು ತಾನು ತಪ್ಪನ್ನು ಎಸಗಿರುವುದಿಲ್ಲ, ಅಧಿವಿಚಾರಣೆಯಾಗಲಿ ಎಂದು ಉತ್ತರಿಸಿದ ಪರಿಣಾಮವಾಗಿ ಪ್ರಕರಣವನ್ನು ಅಧಿವಿಚಾರಣೆಗೆ ಕಾಯ್ದಿರಿಸಲಾಗಿರುತ್ತದೆ.

**6.** ಅಭಿಯೋಜನಾ ಪಕ್ಷವು ಆರೋಪಿಯ ಮೇಲೆ ಹೊರಿಸಿರುವ ಆರೋಪವನ್ನು ರುಜುವಾತು ಪಡಿಸುವ ನಿಟ್ಟಿನಲ್ಲಿ ಪ್ರಾಸಾ.1 ಸಾಕ್ಷಿದಾರರನ್ನು ವಿಚಾರಣೆ ಮಾಡಿರುತ್ತಾರೆ. ಮೇಲ್ಕಂಡ ವಿಚಾರಣಾ ಕಾಲದಲ್ಲಿ ಎರಡು ದಸ್ತಾವೇಜಗಳನ್ನು ನಿಪಿ.1 ಮತ್ತು ನಿಪಿ.2 ಎಂದು ನಿಶಾನೀಕರಿಸಲಾಗಿರುತ್ತದೆ.

**7.** ಅಭಿಯೋಜನೆಯ ಪ್ರಕರಣದ ಸಾಕ್ಷಿ ವಿಚಾರಣೆ ಮುಗಿದ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯನ್ನು ಪ್ರಶ್ನಿಸಿ ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಯಿತು.

**8.** ಉಭಯ ಪಕ್ಷಗಾರರ ವಾದ ವಿವಾದಗಳನ್ನು ಆಲಿಸಲಾಯಿತು ಹಾಗೂ ಕಡತದ ಮೇಲಿರುವ ಎಲ್ಲಾ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ಪರಿಣಾಮವಾಗಿ ಪ್ರಸ್ತುತ ಪ್ರಕರಣದ ಇತ್ಯರ್ಥಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತದೆ.

1. ದಿನಾಂಕ 24.07.2022 ರಂದು ಸಂಜೆ 6.10 ಗಂಟೆ ಸಮಯದಲ್ಲಿ ಕೆಸ್ತೂರು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಮಾಚಹಳ್ಳಿ ಗೇಟ್ ನ ಮಾಚಹಳ್ಳಿ-ಚನ್ನಪಟ್ಟಣ ರಸ್ತೆಯಲ್ಲಿ ಚಾಸಾ.1 ರವರು ಸಮವಸ್ತ್ರದಲ್ಲಿ ವಾಹನಗಳನ್ನು ತಪಾಸಣೆ ಮಾಡುತ್ತಿದ್ದಾಗ ಆರೋಪಿಯು ಮದ್ಯಪಾನ ಮಾಡಿ ತನ್ನ ಬಾಬ್ತು ಕೆಎ.11 ಬಿ.2792 ಸಂಖ್ಯೆಯ ಕಾರನ್ನು ಚಾಲನೆ ಮಾಡಿಕೊಂಡು ಹೋಗಿರುವ ಮೂಲಕ ಆರೋಪಿಯು ಭಾರತೀಯ ಮೋಟಾರು ವಾಹನ ಕಾಯ್ದೆಯ ಕಲಂ 185 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾನೆಂದು ಅಭಿಯೋಜನಾ ಪಕ್ಷವು ನಿಸ್ಸಂಶಯವಾಗಿ ರುಜುವಾತು ಪಡಿಸಿರುತ್ತಾರೆಯೇ?

2. ಮಾಡುವ ಆದೇಶವೇನು ?

**9.** ಮೇಲ್ಕಂಡ ಅಂಶಗಳಿಗೆ ಸಂಬಂಧಿಸಿದಂತೆ ಅಭಿಯೋಜನಾ ಪಕ್ಷವು ಕಡತದ ಮೇಲೆ ಹಾಜರುಪಡಿಸಿರುವ ಸಾಕ್ಷಿದಾರರ ಮೌಖಿಕ ಸಾಕ್ಷ್ಯ ಹಾಗೂ ದಸ್ತಾವೇಜು ಸಾಕ್ಷ್ಯಗಳನ್ನು ಪರಾಮರ್ಶೆ ಮಾಡಿದೆ. ಆ ಪರಿಣಾಮವಾಗಿ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿರುತ್ತದೆ.

ಅಂಶ **1** ಃ- ಸಕಾರಾತ್ಮಕವಾಗಿ,
ಅಂಶ **2** ಃ- ಅಂತಿಮ ಆದೇಶದಂತೆ, ಈ ಕೆಳಕಂಡಂತೆ,

## ಕಾರಣಗಳು

**10. ಅಂಶ. 1 ಃ-** ಆರೋಪಿಯು ಘಟನಾ ದಿವಸ, ಘಟನಾ ಸ್ಥಳದಲ್ಲಿ, ಘಟನಾ ಸಮಯದಲ್ಲಿ ಆಪಾದಿತ ಕೃತ್ಯವನ್ನು ಎಸಗುವುದರ ಮೂಲಕ ಭಾರತೀಯ ಮೋಟಾರು ವಾಹನ ಕಾಯ್ದೆಯ ಕಲಂ 185 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂಬುದು ಅಭಿಯೋಜನೆಯ ಸ್ಪಷ್ಟ ನಿಲುವಾಗಿರುತ್ತದೆ.

**11.** ಕ್ರಿಮಿನಲ್ ಪ್ರಕ್ರಿಯಾ ತತ್ವದ ಅಡಿಯಲ್ಲಿ ಆರೋಪಿಯ ಮೇಲೆ ಹೊರಿಸಿರುವ ಆಪಾದನೆಗಳ ಎಲ್ಲಾ ಘಟಕಾಂಶಗಳನ್ನು ನಿಸ್ಸಂಶಯವಾಗಿ ರುಜುವಾತು ಪಡಿಸುವ ಹೊಣೆ ಅಭಿಯೋಜನೆಯದ್ದಾಗಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಅಭಿಯೋಜನಾ ಪಕ್ಷವು ತನ್ನ ಮೇಲಿರುವ ಪ್ರಮುಖ ಹೊಣೆಯನ್ನು ರುಜುವಾತು ಪಡಿಸುವ ನಿಟ್ಟಿನಲ್ಲಿ ಪ್ರಾಸಾ.1 ರವರ ಮೌಖಿಕ ಸಾಕ್ಷ್ಯ ಹಾಗೂ ನಿಪಿ.1 ಮತ್ತು 2 ರ ದಸ್ತಾವೇಜು ಸಾಕ್ಷ್ಯಗಳನ್ನು ಕಡತದ ಮೇಲೆ

ತಂದಿರುತ್ತಾರೆ.

**12.** ಪ್ರಸ್ತುತ ಪ್ರಕರಣದಲ್ಲಿ ಚರ್ಚಿಸಬೇಕಾದ ಪ್ರಮುಖ ಅಂಶವೇನೆಂದರೆ ಈ ಪ್ರಕರಣವನ್ನು ಚಾಸಾ.1 ರವರು ಸ್ವಯಂಪ್ರೇರಿತವಾಗಿ ದಾಖಲು ಮಾಡಿಕೊಂಡಿರುತ್ತಾರೆ. ಈ ಪ್ರಕರಣದಲ್ಲಿ ಅಭಿಯೋಜನೆಯವರು ಹಾಜರು ಪಡಿಸಿರುವ ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯಗಳನ್ನು ಸಂಕ್ಷಿಪ್ತವಾಗಿ ಪರಿಶೀಲಿಸಿದಾಗ ಚಾಸಾ.1 ರವರನ್ನು ಪ್ರಾಸಾ.1 ಎಂದು ವಿಚಾರಣೆ ಮಾಡಿದ್ದು, ಅವರು ತಮ್ಮ ಮುಖ್ಯ ಸಾಕ್ಷ್ಯ ವಿಚಾರಣೆಯಲ್ಲಿ, ದಿನಾಂಕಃ 24.07.2022 ರಂದು ಸಂಜೆ 06.10 ಗಂಟೆ ಸಮಯದಲ್ಲಿ ಮಾಚನಹಳ್ಳಿ ಬಳಿ ಗಲಾಟೆಯಾಗಿರುವ ಬಗ್ಗೆ ಬಂದ ಮಾಹಿತಿಯ ಮೇರೆಗೆ, ಮಾಚನಹಳ್ಳಿಗೆ ತಾವು ಹೋಗಿದ್ದು, ನಂತರ ಸ್ಥಳದಲ್ಲಿ ಸ್ವಿಫ್ಟ್ ಡಿಸೈರ್ ಕೆಎ-11 ಬಿ-2792 ರ ಕಾರಿನಲ್ಲಿ ನಾಲ್ಕು ಜನ, ಗಲಾಟೆ ಮಾಡುತ್ತಿದ್ದು, ಸದರೀ 4 ಜನದ ಪೈಕಿ ಇಬ್ಬರು ವ್ಯಕ್ತಿಗಳು ತಮ್ಮ ಸರ್ಕಾರಿ ಕರ್ತವ್ಯಕ್ಕೆ ಅಡಚಣೆ ಉಂಟು ಮಾಡಿದ್ದು, ಸದರೀ ಕಾರಿನ ಚಾಲಕನನ್ನು ಸ್ಥಳದಿಂದ ಠಾಣೆಗೆ ಕರೆದುಕೊಂಡು ಬಂದಿದ್ದು, ಆಗ ಸದರೀ ಚಾಲಕ ಮಧ್ಯಪಾನ ಮಾಡಿರುತ್ತಾನೆಂದು, ಸಂಜೆ 07.29 ರ ಸಮಯದಲ್ಲಿ ಬ್ರೆತ್ ಅನಲೈಸರ್ ನಿಂದ ಪರಿಶೀಲಿಸಿದಾಗ, ಸದರೀ ಬ್ರೆತ್ ಅನಲೈಸರ್ ಉಪಕರಣದಲ್ಲಿ ಸದರೀ ಕಾರಿನ ಚಾಲಕ, ಮಧ್ಯಪಾನವನ್ನು ಮಾಡಿರುವ ಬಗ್ಗೆ ದೃಢಪಟ್ಟಿರುತ್ತದೆ. ಆದ ಕಾರಣ ಸದರೀ ಚಾಲಕನಾದ ಮಂಜುಕುಮಾರ್ ಎಂಬುವವರ ವಿರುದ್ದ ಕಲಂ 185 ಐ ಎಂ ವಿ ಕಾಯ್ದೆಯಡಿ ಪ್ರಕರಣವನ್ನು ದಾಖಲಿಸಿ ದೋಷಾರೋಪಣೆ ಪಟ್ಟಿಯನ್ನು ಮತ್ತು ಬ್ರೆತ್ ಅನಲೈಸೇಷರ್ ನ ಚಲನ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಈ ದಿನ ನ್ಯಾಯಾಲಯದಲ್ಲಿರುವ ಆರೋಪಿಯೇ ಆ ದಿನ ಮಧ್ಯಪಾನ ಮಾಡಿ ಕೆಎ-11 ಬಿ-2792 ರ ಕಾರಿನ್ನು ಚಲಾಯಿಸಿರುವ ವ್ಯಕ್ತಿಯಾಗಿರುತ್ತಾನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**13.** ಅಭಿಯೋಜನೆಯವರು ಹಾಜರುಪಡಿಸಿರುವ ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ದಿನಾಂಕ 24.07.2022 ರಂದು ಸಂಜೆ 6.10 ಗಂಟೆ ಸಮಯದಲ್ಲಿ ಕೆಸ್ತೂರು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಮಾಚಹಳ್ಳಿ ಗೇಟ್ ನ ಮಾಚಹಳ್ಳಿ-ಚನ್ನಪಟ್ಟಣ ರಸ್ತೆಯಲ್ಲಿ ಚಾಸಾ.1 ರವರು ಸಮವಸ್ತ್ರದಲ್ಲಿ ವಾಹನಗಳನ್ನು ತಪಾಸಣೆ ಮಾಡುತ್ತಿದ್ದಾಗ ಆರೋಪಿಯು ಮದ್ಯಪಾನ ಮಾಡಿ ತನ್ನ ಬಾಬ್ತು ಕೆಎ.11 ಬಿ.2792 ಸಂಖ್ಯೆಯ ಕಾರನ್ನು ಚಾಲನೆ ಮಾಡಿಕೊಂಡು ಹೋಗಿರುತ್ತಾರೆಂಬುದು

ಅಭಿಯೋಜನೆಯ ಸ್ಪಷ್ಟ ನಿಲುವಾಗಿರುತ್ತದೆ. ಚಾಸಾ.1 ರವರು ನಿಪಿ.1 ರ ದೂರಿಗೆ ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಹಾಗೂ ನಿಪಿ.1 ರಲ್ಲಿ ಆರೋಪಿಯು ಮದ್ಯಪಾನ ಸೇವನೆ ಮಾಡಿರುವ ಬಗ್ಗೆ ದಿನಾಂಕ 24.07.2022 ರಂದು ಸೂಕ್ತ ಉಪಕರಣದಿಂದ ಪರೀಕ್ಷೆ ಮಾಡಿದ ನಂತರ ಆರೋಪಿಯು ಸುಮಾರು 100 ಎಂ ಎಲ್ ಮದ್ಯಪಾನದ ಕುರುಹು ಇರುವ ಬಗ್ಗೆ ನಿಪಿ.1 ರಲ್ಲಿ ನಮೂದು ಆಗಿರುತ್ತದೆ. ಹಾಗೂ ಆರೋಪಿಯು ಸದರಿ ದಿನಾಂಕದಂದು ಕೆಎ.11 ಬಿ.2792 ರ ವಾಹನವು ಚಲಾಯಿಸುತಿದ್ದ ಬಗ್ಗೆ ಸದರಿ ನಿಪಿ.1 ರಲ್ಲಿ ನಮೂದು ಇರುತ್ತದೆ. ಮೇಲಿನ ಅಂಶವನ್ನು ಪರಿಶೀಲಿಸಲಾಗಿ ಆರೋಪಿಯು ಮದ್ಯಪಾನ ಮಾಡಿ ಕೆಎ.11 ಬಿ.2792 ರ ವಾಹನವು ಚಾಲನೆ ಮಾಡಿರುವುದು ನಿಪಿ.1 ರಲ್ಲಿ ಕಂಡು ಬರುತ್ತದೆ, ಆದರೆ ಆರೋಪಿಯು ತನ್ನ ಪ್ರತಿವಾದದಲ್ಲಿ ಆ ದಿನ ತಾನು ಕೆಎ.11 ಬಿ 2792 ರ ವಾಹನವನ್ನು ಚಾಲನೆ ಮಾಡುತ್ತಿರಲಿಲ್ಲ ಆದರೆ ಸದರಿ ವಾಹನದಲ್ಲಿ ಇದ್ದೆ ಎಂದು ಮಾತ್ರ ಪ್ರತಿವಾದವನ್ನು ತೆಗೆದುಕೊಂಡಿರುತ್ತಾರೆ. ಆದರೆ ಆರೋಪಿಯನ್ನು ಹೊರತುಪಡಿಸಿ ಬೇರೆ ಯಾವ ವ್ಯಕ್ತಿ ಸದರಿ ವಾಹನವನ್ನು ಚಾಲನೆ ಮಾಡುತ್ತಿದ್ದರು ಎಂದು ಆರೋಪಿಯು ಎಲ್ಲಿಯೂ ಹೇಳಿರುವುದಿಲ್ಲ. ಆರೋಪಿಯು ಸದರಿ ವಾಹನವನ್ನು ಚಾಲನೆ ಮಾಡದೆ ಇದ್ದರೆ ಸದರಿ ವಾಹನ ಸಾರ್ವಜನಿಕ ರಸ್ತೆಗೆ ಸ್ವಯಂಚಾಲಿತವಾಗಿ ಬರಲು ಸಾದ್ಯವಾಗುತ್ತದೆಯೇ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಹಾಗಾಗಿ ಆರೋಪಿಯು ತೆಗೆದುಕೊಂಡಿರುವ ಪ್ರತಿವಾದವನ್ನು ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಸಾಬೀತುಪಡಿಸಿದ ನಂತರ ಸದರಿ ಪ್ರತಿವಾದದ ಆಧಾರದ ಮೇಲೆ ಆರೋಪಿಯು ತನ್ನ ವಿರುದ್ದ ಪ್ರಕರಣವನ್ನು ನಿಸ್ಸಾಬೀತುಗೊಳಿಸಲು ವಿಫಲರಾಗಿರುತ್ತಾರೆ. ಮೇಲಿನ ಅಂಶಗಳನ್ನು ಕೂಲಂಕೂಷವಾಗಿ ಪರಿಶಿಲಿಸಿದ ನಂತರ ಮತ್ತು ಅಭಿಯೋಜನೆಯವರು ಹಾಜರುಪಡಿಸಿದ ದಾಖಲಾತಿಗಳ ಆಧಾರದ ಮೇಲೆ ಆರೋಪಿಯು ಮೇಲ್ಕಂಡ ಅಪರಾಧ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ ಹಾಗೂ ಅಭಿಯೋಜನೆಯವರು ಸಹ ಸಾಕ್ಷ್ಯಧಾರಗಳ ಮೂಲಕ ಆರೋಪಿಯು ಕೃತ್ಯವನ್ನು ಎಸಗಿರುತ್ತಾರೆಂದು ಸಾಬೀತುಪಡಿಸುವಲ್ಲಿ ಸಫಲರಾಗಿರುತ್ತಾರೆ. ಅದಕಾರಣ ಮೇಲ್ಕಂಡ ಅಂಶ 1 ಕ್ಕೆ ನ್ಯಾಯಾಲಯವು ಸಕಾರಾತ್ಮಕವಾಗಿ ಉತ್ತರಿಸುತ್ತದೆ.

**14. ಅಂಶ 2 :-** ಅಂಶ 1 ರಲ್ಲಿ ಚರ್ಚಿಸಿರುವ ಕಾರಣಗಳಿಗಾಗಿ ಅಭಿಯೋಜನಾ ಪಕ್ಷದವರು ತಮ್ಮ ಪ್ರಕರಣವನ್ನು ರುಜುವಾತುಪಡಿಸಲು ಸಫಲರಾದ ಕಾರಣ ಈ ಕೆಳಕಂಡಂತೆ ಆದೇಶಿಸಲಾಗಿದೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆಯ ಕಲಂ 255(2)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಆರೋಪಿಯ ವಿರುದ್ಧ ಭಾರತೀಯ ಮೋಟಾರು ವಾಹನ ಕಾಯ್ದೆಯ ಕಲಂ 185 ರ ಅಪಾದನೆಗಾಗಿ ಆರೋಪಿಯನ್ನು ದೋಷಿ ಎಂದು ನಿರ್ಣಯಿಸಲಾಗಿದೆ.

ಆರೋಪಿಯು ಮೇಲಿನ ಅಪಾದನೆಗೆ 10,000/- ರೂಪಾಯಿಗಳ ದಂಡವನ್ನು ಪಾವತಿ ಮಾಡಲು ಆದೇಶಿಲಾಗಿದೆ. ದಂಡವನ್ನು ಪಾವತಿಸಲು ತಪ್ಪಿದ್ದಲ್ಲಿ ಸದರಿಯವರು 1 ತಿಂಗಳ ಸಾದಾ ಕಾರಾಗೃಹ ಶಿಕ್ಷೆ ಅನುಭವಿಸಬೇಕೆಂದು ಆದೇಶಿಸಲಾಗಿದೆ.

ಆರೋಪಿಗೆ ತೀರ್ಪಿನ ನಕಲು ಪ್ರತಿಯನ್ನು ಉಚಿತವಾಗಿ ನೀಡಲು ಕಚೇರಿಗೆ ಆದೇಶಿಸಲಾಗಿದೆ.

(ತೀರ್ಪನ್ನು ಶೀಘ್ರಲಿಪಿಗಾರನಿಗೆ ಉಕ್ತಲೇಖನ ನೀಡಿ, ಅವರು ಲಿಪ್ಯಂತರಿಸಿ, ಗಣಕೀಕೃತವಾದ ನಂತರ ತಿದ್ದುಪಡಿ ಮಾಡಿ, ತೆರೆದ ನ್ಯಾಯಾಲಯದಲ್ಲಿ ದಿನಾಂಕ **02** ನೇ ಏಪ್ರಿಲ್ **2026** ರಂದು ಘೋಷಿಸಲಾಯಿತು)

(ಶ್ರೀಮತಿ. ಪಾರ್ವತಿ ಸಿ.ಎಂ)
1 ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಮದ್ದೂರು.

## :: ಅನುಸೂಚಿ ::

ಅಭಿಯೋಜನೆಯ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ

ಪ್ರಾ.ಸಾ.1 : ನವೀನ್ ಕುಮಾರ್ ಎಂ ಜಿ

ಅಭಿಯೋಜನೆಯ ಪರ ಗುರುತಿಸಿಕೊಂಡ ದಾಖಲಾತಿಗಳ ಪಟ್ಟಿ

| | | |
|---|---|---|
| ನಿ.ಪಿ 1 | : | ಬ್ರೆತ್ ಅನಲೈಷರ್ ಚಲನ್ |
| ನಿ.ಪಿ 1(ಎ) | : | ಸಹಿ |
| ನಿ.ಪಿ 2 | : | ನೋಟೀಸ್ |
| ನಿ.ಪಿ 2(ಎ) | : | ಸಹಿ |

ಆರೋಪಿಯ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ

--ಇಲ್ಲ--

ಆರೋಪಿಯ ಪರ ಗುರುತಿಸಿಕೊಂಡ ದಾಖಲಾತಿಗಳ ಪಟ್ಟಿ

--ಇಲ್ಲ--

ಅಭಿಯೋಜನೆಯ ಪರ ಗುರುತಿಸಿಕೊಂಡ ಮುದ್ದೆ ಮಾಲುಗಳ ಪಟ್ಟಿ

--ಇಲ್ಲ--

**(ಶ್ರೀಮತಿ. ಪಾರ್ವತಿ ಸಿ.ಎಂ)**
**1** ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಮದ್ದೂರು.